ಪಿ ಡಬ್ಲ್ಯೂ ಃ **4 – ಎನ್. ಶಿವಕುಮಾರ್**

ಸಾಕ್ಷಿಗೆ ದಿನಾಂಕಃ **04.04.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿಗಳ ಪರ: ಶ್ರೀ. ಪಿ.ಎಸ್. ವಕೀಲರಿಂದ:

ನಾನು **2009** ರಿಂದ ಪತ್ರ ಬರಹಗಾರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಪತ್ರ ಬರಹಗಾರನಾಗಿ ಕೆಲಸ ಮಾಡಲು ಪಡೆದ ಪರವಾನಿಗೆಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನೇ ತಯಾರು ಮಾಡಿಸಿರುತ್ತೇನೆ. **2015** ರಲ್ಲಿ ಕರಾರು ಮಾಡಿಸಲು ಬಂದಾಗ ನನಗೆ ವಾದಿ ಮತ್ತು ಪ್ರತಿವಾದಿಯ ಪರಿಚಯವಾಗಿರುತ್ತದೆ. ಸದರಿ ಇಬ್ಬರು ವ್ಯಕ್ತಿಗಳು ಕ್ರಯದ ವ್ಯವಹಾರದ ಬಗ್ಗೆ ನನಗೆ ತಿಳಿಸಿರುತ್ತಾರೆ. ಆರ್.ಟಿ.ಸಿ. ಆಧಾರ್ ಕಾರ್ಡ್ ನೋಡಿ ಪತ್ರವನ್ನು ತಯಾರು ಮಾಡಿರುತ್ತೇನೆ. ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತು ಎಂದು ತಿಳಿದುಕೊಂಡಿರುತ್ತೇನೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ದಾಖಲೆಯನ್ನು ಪರಿಶೀಲಿಸಿದಾಗ ಬಸವೇಗೌಡ ಮತ್ತು ಅವರ ಮಕ್ಕಳ ಹೆಸರಿನಲ್ಲಿ ಇರುತ್ತದೆ. ಪ್ರತಿವಾದಿಗಳ ಹೇಳಿಕೆ ಮೇರೆಗೆ ನಾನು ನಿಪಿ **1** ನ್ನು ತಯಾರು ಮಾಡಿದ್ದು, ವಂಶವೃಕ್ಷವನ್ನು ನೋಡಿರುವುದಿಲ್ಲ. ಒಟ್ಟು ಕುಟುಂಬದ ಬಗ್ಗೆ ನಿಪಿ **1** ರಲ್ಲಿ ಪ್ರಸ್ತಾಪ ಮಾಡಿರುವುದಿಲ್ಲ.

**2. 5,50,000/-**ರೂಪಾಯಿಗಳಿಗೆ ಕರಾರು ಪತ್ರವಾಗಿದ್ದು, ಹಣವನ್ನು ಮನೆಯಲ್ಲಿಯೇ ಪಡೆದುಕೊಂಡ ಬಗ್ಗೆ ತಿಳಿಸಿರುತ್ತಾರೆ. ಸದರಿ ವಿಚಾರವನ್ನು ನಿಪಿ **1** ರಲ್ಲಿ ತಿಳಿಸಿರುವುದಿಲ್ಲ. ಪ್ರತಿಫಲ ಮೊತ್ತವನ್ನು ನೊಂದಣಿ ಅಧಿಕಾರಿಯ ಮುಂದೆ ಕೊಡಬೇಕು ಎಂದರೆ ಸರಿಯಲ್ಲ. ನಗದು ರೂಪದಲ್ಲಿ ಹಣವನ್ನು ಪಡೆದ ಬಗ್ಗೆ ಹೇಳಿರುತ್ತಾರೆ. ವಾದಿಯು ಎಲ್ಲಾ ಪತ್ರ ವ್ಯವಹಾರಗಳನ್ನು ನನ್ನ ಮುಂದೆ ಮಾಡಿಸುತ್ತಾರೆ ಎಂದರೆ ಕರಾರು ಮಾತ್ರ ಮಾಡಿಸುತ್ತಾರೆ. ವಾದಿಯು ಲೇವಾದೇವಿ ವ್ಯವಹಾರ ಮಾಡುವ ಕಾರಣ ನನ್ನ ಮೂಲಕ ಹಲವು ದಾಖಲೆಗಳನ್ನು ತಯಾರು ಮಾಡಿಸಿದ್ದು, ಆದ್ದರಿಂದ ನಾನು ಪ್ರತಿವಾದಿಗಳ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. **5,50,000/-** ರೂಪಾಯಿಗಳಿಗೆ ಕಾರಾರು ಆಗಿದೆ ಎಂದು ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ದಾವೆಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಸಾಕ್ಷಿದಾರರು ಸಹಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪತ್ರ ಬರಹಗಾರ ಅಲ್ಲದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಮಳವಳ್ಳಿ.